ಸಾಕ್ಷಿಯ ಹೆಸರುಃ ಫೈಜ್ ಅಹಮ್ಮದ್ ಖಾನ್

ದಿನಾಂಕ 26-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಕೆ.ಎಸ್. ವಕೀಲರಿಂದಃ

15) ನ್ಯಾಯಾಲಯದಲ್ಲಿ ಸಾಕ್ಷಿ ಕಟಕಟೆಯಲ್ಲಿರುವ ಪ್ರತಿಜ್ಞಾ ವಿಧಿ ಕನ್ನಡ ಭಾಷೆಯಲ್ಲಿದೆ, ನಾನು ಅದನ್ನು ಓದಿದ್ದೇನೆ. ಸಾಕ್ಷಿಗೆ ಈಗ ಇನ್ನೊಂದು ಬಾರಿ ಪ್ರತಿಜ್ಞಾ ವಿಧಿಯನ್ನು ಓದಲು ಹೇಳಿದಾಗ, ಸಾಕ್ಷಿ ಕನ್ನಡ ಭಾಷೆಯಲ್ಲಿರುವ ಪ್ರತಿಜ್ಞಾ ವಿಧಿಯನ್ನು ಸ್ಪಷ್ಟವಾಗಿ ಓದಿರುತ್ತಾರೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತಿದ್ದರೂ ಸಹ, ನಾನು ನ್ಯಾಯಾಲಯದಲ್ಲಿ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲವೆಂದು ಸುಳ್ಳು ಸಾಕ್ಷ್ಯ ಹೇಳಿದ್ದೇನೆ ಎಂದರೆ ಸಾಕ್ಷಿ ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ ಎನ್ನುತ್ತಾರೆ. ನಾನು ಕಳೆದ ಬಾರಿ ನ್ಯಾಯಾಲಯದಲ್ಲಿ ಕನ್ನಡ ಭಾಷೆಯ ಓದಲು ಬರೆಯಲು ಬರುವುದಿಲ್ಲವೆಂದು ಹೇಳಿರುವ ವಿಷಯ ನಿಜವೋ ಅಥವಾ ಈ ದಿನ ನಾನು ನ್ಯಾಯಾಲಯದಲ್ಲಿ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ ಎಂದು ಹೇಳಿರುವ ವಿಷಯ ನಿಜವೋ ಎಂದರೆ ಕಳೆದ ಬಾರಿ ಹೇಳಿರುವ ಸಾಕ್ಷ್ಯ ನಿಜ ಹಾಗೂ ಈ ದಿನ ಹೇಳಿರುವುದು ನಿಜವಲ್ಲ ಎನ್ನುತ್ತಾರೆ.

16) 1 ನೇ ಪ್ರತಿವಾದಿ ಎಂ.ಕೆ.ಜೈಬುನ್ನಿಸಾ ಇವರ ಹುಟ್ಟೂರು ಶನಿವಾರಸಂತೆ ಎಂದರೆ ನನಗೆ ಗೊತ್ತಿಲ್ಲ. ಅವರು ಶನಿವಾರಸಂತೆಯಲ್ಲಿಯೇ ಮದುವೆಯಾಗಿರುವ ವಿಚಾರ ನನಗೆ ಗೊತ್ತಿಲ್ಲ. ಅವರ ಮದುವೆ ದಿನಾಂಕಃ03.05.1951 ರಲ್ಲಿ ನಿಸ್ಸಾರ್ ಅಹಮ್ಮದ್ ರಬ್ಬಾನಿ ಎಂಬುವವರೊಂದಿಗೆ ಮದುವೆಯಾದ ವಿಚಾರ ನನಗೆ ಗೊತ್ತಿಲ್ಲ. ಮುಸ್ಲಿಂ ಸಂಪ್ರದಾಯದ ಪ್ರಕಾರ ಮದುವೆಯಾದ ನಂತರ, ಗಂಡ ಹೆಂಡತಿ ಮಸೀದಿಗೆ ಹೋಗಿ ರೆಜಿಸ್ಟರ್ ನಲ್ಲಿ ತಮ್ಮ ವಿವಾಹವನ್ನು ನಮೂದು ಮಾಡಿ ಸಹಿ ಮಾಡಿ ಬರುತ್ತಾರೆ ಎಂದರೆ ಸರಿ. ನನಗೆ ನಮ್ಮ ಭಾಷಯಾದ ಉರ್ದು ಭಾಷೆ ಓದಲು ಬರೆಯಲು ಬರುವುದಿಲ್ಲ. ಸಾಕ್ಷಿಗೆ ಈಗ 1 ನೇ ಪ್ರತಿವಾದಿ ಹಾಗೂ ನಿಸ್ಸಾರ್

ಅಹಮ್ಮದ್ ರಬ್ಬಾನಿ ರವರ ನಿಖಾನಾಮಾದ ದೃಢೀಕೃತ ಪ್ರತಿಯನ್ನು ತೋರಿಸಿ, ಇದು ಅವರ ಮದುವೆಯ ನಿಖಾನಾಮಾ ಎಂದು ತೋರಿಸಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ನಿಖಾನಾಮಾದಲ್ಲಿ 1ನೇ ಪ್ರತಿವಾದಿ ನಿಸ್ಸಾರ್ ಅಹಮ್ಮದ್ ರಬ್ಬಾನಿರವನ್ನು ಮದುವೆ ಮಾಡಿಕೊಂಡು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ನಿಖಾನಾಮಾದಲ್ಲಿ ನಿಸ್ಸಾರ್ ಅಹಮ್ಮದ್ ರಬ್ಬಾನಿರವರು ಉರ್ದು ಭಾಷೆಯಲ್ಲಿ ಸಹಿ ಮಾಡಿದ್ದು, ಆದರೆ ನಾನು ಹಾಜರುಪಡಿಸಿದ ನಿಡಿ-45 ಹಿಬಾ ನಾಮಾ ಆಂಗ್ಲ ಭಾಷೆಯಲ್ಲಿ ನಿಸ್ಸಾರ್ ಅಹಮ್ಮದ್ ರಬ್ಬಾನಿ ಸಹಿ ಮಾಡಿದ್ದು, ಈ ಎರಡೂ ಸಹಿಗಳಲ್ಲಿ ವ್ಯತ್ಯಾಸವಿದೆ ಎಂದರೆ ಸರಿ.

17) ಈ ದಾವೆಯು ಹಾಕಿದ ನಂತರ ದಿನಾಂಕ:20.08.2015 ರಂದು ನಾನು ವಕೀಲರ ಮುಖಾಂತರ ಈ ದಾವೆಯಲ್ಲಿ ಹಾಜರಾಗಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಹಾಜರಾಗಿಲ್ಲ ನನ್ನ ಅಣ್ಣ ಹಾಜರಾಗಿರುತ್ತಾರೆ ಎನ್ನುತ್ತಾರೆ. ನಂತರ ನಮ್ಮ ವಕೀಲರಿಗೆ ವಕಾಲತ್ ನಾಮಾವನ್ನು ಸಹಿ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಂತರ ಈ ನ್ಯಾಯಾಲಯ ಸ್ಟೇಟಸ್ ಕೋ ಆದೇಶ ಮಾಡಿರುವುದು ನನಗೆ ಗೊತ್ತಿಲ್ಲ. ಸದರಿ ಆದೇಶ ಚಾಲ್ತಿಯಲ್ಲಿದ್ದರೂ ಸಹ ನಾನು ಮತ್ತು ನನ್ನ ಅಣ್ಣ ಸದರಿ ಆದೇಶವನ್ನು ಉಲ್ಲಂಘನೆ ಮಾಡಿ 1ನೇ ಪ್ರತಿವಾದಿಯೊಂದಿಗೆ ಸೇರಿ ನಿಡಿ-06ರಂತೆ ಕ್ರಯದ ತಿದ್ದುಪಡಿ ಪತ್ರವನ್ನು ಮಾಡಿಸಿಕೊಂಡಿದ್ದೆವು ಎಂದರೆ ಸರಿ. ನಮ್ಮ ವಕೀಲರು ಇದು ಕಾನೂನಿನ ಉಲ್ಲಂಘನೆಯಾಗುತ್ತದೆ ಎಂದು ತಿಳಿಸಿದ್ದರೂ ಸಹ ನಾವು ಈ ಪತ್ರವನ್ನು ಮಾಡಿಸಿಕೊಂಡಿದ್ದೆವು ಎಂದರೆ ಸರಿಯಲ್ಲ. ನಮ್ಮ ವಕೀಲರು ನನಗೆ ಈ ವಿಷಯವನ್ನು ತಿಳಿಸಿರಲಿಲ್ಲ.

18) ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತು. ನಿಡಿ-11 ವಿಭಾಗ ಪತ್ರದ ಪ್ರಕಾರ ಅಬ್ದುಲ್ ರಜಾಕ್, ನಿಸ್ಸಾರ್ ಅಹಮ್ಮದ್ ರವರಿಗೆ ನಿಖರವಾದ ಭಾಗವನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ನಿಡಿ-11ರಲ್ಲಿ ಅವರಿಗೆ ಬಂದ ಭಾಗ ಎಲ್ಲಿ ಬರೆದಿದೆ ಎಂದು ತೋರಿಸಲು ಬರುತ್ತದೆಯೇ ಎಂದರೆ ಸಾಕ್ಷಿ ಬರುವುದಿಲ್ಲ ಎನ್ನುತ್ತಾರೆ. ಈ ವಿಭಾಗದ ಪತ್ರದಲ್ಲಿರುವ ಅಂಶಗಳು

ಹಾಗೂ ಪ್ರಕರಣದ ಮಾಹಿತಿಯನ್ನು ನಮ್ಮ ವಕೀಲರಿಗೆ ನನ್ನ ಅಣ್ಣ ನೀಡಿರುತ್ತಾರೆ. 3 ನೇ ವಾದಿಯ ಭಾವ ಒಂದು ಟೀ ಅಂಗಡಿಯನ್ನು ನಡೆಸುತ್ತಾರೆ ಎಂದರೆ ಸರಿಯಲ್ಲ. ಎಂ.ಕೆ.ಜೈಬುನ್ನಿಸಾ ಎಂದೂ ದಾವಾಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಹಾಗೂ ಅವರು ಹೊಳೆನರಸೀಪುರದಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ಅವರು ಕೆ.ಆರ್.ನಗರದಲ್ಲಿ ವಾಸವಾಗಿದ್ದರು ಎನ್ನುತ್ತಾರೆ. ಅವರಿಗೆ ಗಂಡ ಮಕ್ಕಳು ಸಹೋದರ ಸಹೋದರಿಯರು ಯಾರೂ ಇರಲಿಲ್ಲ, ಆದ್ದರಿಂದ ಅವರು ಯಾವ ಮನೆಯಲ್ಲಿ ವಾಸವಾಗಿದ್ದರು ಎಂದು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಾವು ಮಾಡಿಸಿಕೊಂಡ ಕ್ರಯಪತ್ರಗಳನ್ನು ನಮ್ಮ ವಕೀಲರು ಹೇಳಿ ಬರೆಯಿಸಿರುತ್ತಾರೆ. ನಮ್ಮ ವಕೀಲರಿಗೆ ಎಂ.ಕೆ.ಜೈಬುನ್ನಿಸಾರವರನ್ನು ನನ್ನ ಅಣ್ಣ ಪರಿಚಯಿಸಿದ್ದರು. ಎಂ.ಕೆ.ಜೈಬುನ್ನಿಸಾರವರು ಕೆ.ಆರ್.ನಗರದ ಯಾವ ವಿಳಾಸದಲ್ಲಿ ವಾಸವಾಗಿದ್ದರು ಎಂದು ಹೇಳಲು ನನಗೆ ಜ್ಞಾಪಕ ಇಲ್ಲ. ಸಾಕ್ಷಿಗೆ ನಿಡಿ-06 ರಲ್ಲಿ 1 ನೇ ಪ್ರತಿವಾದಿ ಎಂ.ಕೆ.ಜೈಬುನ್ನಿಸಾರವರ ವಿಳಾಸವನ್ನು ಓದಿ ಹೇಳಿದಾಗ, ಸಾಕ್ಷಿ ಹೌದು ಅವರು ಹೊಳೆನರಸೀಪುರದಲ್ಲಿ ವಾಸವಾಗಿದ್ದರು ಎಂದು ಒಪ್ಪಿಕೊಳ್ಳುತ್ತಾರೆ.

19) ನಿಡಿ-05 ನ್ನು ನ್ಯಾಯಾಲಯಕ್ಕೆ ಸಲ್ಲಿಸಲು ವಕೀಲರಿಗೆ ಯಾರು, ಯಾವಾಗ ಕೊಟ್ಟಿದ್ದರು ಎಂದು ಜ್ಞಾಪಕವಿಲ್ಲ. ನ್ಯಾಯಾಲಯಕ್ಕೆ ಬಂದಾಗಲೇ ಈ ಪತ್ರವಿದೆ ಎಂದು ಗೊತ್ತಾಗಿರುತ್ತದೆ ಎಂದರೆ ಸುಳ್ಳು. ಯಾವ ದಿನಾಂಕದಂದು ಈ ಪತ್ರ ನಮ್ಮ ಕೈಗೆ ಬಂದು ಅದರ ಬಂದು ಅದರ ಬಗ್ಗೆ ಗೊತ್ತಾಯಿತು ಎಂದು ಹೇಳಲು ಜ್ಞಾಪಕವಿಲ್ಲ. ನನಗೆ, ಆಸಿಫ್ ಉಮರ್, ಸಯ್ಯದ್ ಮನ್ಸೂರ್, ಸಿದ್ದಿಖ್ ಅಹಮ್ಮದ್ ಖಾನ್ ಮತ್ತು 1 ನೇ ಪ್ರತಿವಾದಿ ಎಲ್ಲರಿಗೂ ಒಬ್ಬರೇ ವಕೀಲರು ಎಂದರೆ ಸರಿಯಲ್ಲ. 363/2015 ರಲ್ಲಿ 1 ನೇ ಪ್ರತಿವಾದಿ ಪರ ಹಾಜರಾದ ವಕೀಲರು ಹಾಗೂ ಈ ದಾವೆಯಲ್ಲಿ ಮೊದಲು ನಮ್ಮ ಪರ ಹಾಜರಾದ ವಕೀಲರು ಒಂದೇ ಎಂದರೆ ಗೊತ್ತಿಲ್ಲ. ನಾವು ಸಲ್ಲಿಸಿದ ಅಸಲು ದಾವಾ ಸಂಖ್ಯೆ 411/2015 ಮತ್ತು 414/2015 ರಲ್ಲಿ ನಮ್ಮ ಪರ ಹಾಜರಿದ್ದ ವಕೀಲರೇ, ಈ ದಾವೆಯಲ್ಲಿ 1 ನೇ ಪ್ರತಿವಾದಿ ಪರ ಹಾಜರಿದ್ದ ವಕೀಲರು ಒಬ್ಬರೇ ಎಂದರೆ ನನಗೆ ಗೊತ್ತಿಲ್ಲ.

20) ಸಾಕ್ಷಿಗೆ ಈಗ ಒಂದು ಮದುವೆ ಆಮಂತ್ರಣ ಪತ್ರಿಕೆಯನ್ನು ತೋರಿಸಿ , ಇದನ್ನು ಓದಿ ಎಂದು ಹೇಳಿದಾಗ, ಸಾಕ್ಷಿ ಇದು ನಿಸ್ಸಾರ್ ಅಹಮ್ಮದ್ ರಬ್ಬಾನಿರವರ ಮದುವೆಯ ಆಮಂತ್ರಣ ಪತ್ರಿಕೆ ಎಂದು ಓದಿ ತಿಳಿಸಿರುತ್ತಾರೆ ಅದನ್ನು ನಿಪಿ-13 ಎಂದು ಗುರುಸಲಾಯಿತು. ನನಗೆ ಈ ಕೇಸಿನ ವಿಚಾರ 2019 ರಲ್ಲಿ ತಿಳಿದುಬಂದಿತು. ನಿಪಿ-13 ರಲ್ಲಿ ನಿಸ್ಸಾರ್ ಅಹಮ್ಮದ್ ರಬ್ಬಾನಿರವರು ಸೆಂಟ್ರಲ್ ಹೈ ಸ್ಕೂಲ್ ಮಡಿಕೇರಿಯಲ್ಲಿ ಶಿಕ್ಷಕರಾಗಿದ್ದಾರೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ನಮ್ಮ ವಕೀಲರು ಈ ದಾವೆಯಲ್ಲಿ ಸಲ್ಲಿಸಿದ ದಾಖಲೆಗಳನ್ನು ಸಲ್ಲಿಸುವಾಗ ಮಹಮ್ಮದ್ದೀಯರ ಕಾನೂನಿನ ಪ್ರಕಾರ 1 ನೇ ಪ್ರತಿವಾದಿಗೆ ಮಕ್ಕಳಿಲ್ಲದ ಕಾರಣ ಕಾಲು ಭಾಗ ಹಿಸ್ಸೆ ಬರುತ್ತದೆ ಎಂದು ತಿಳಿಸಿರುವುದಿಲ್ಲ. ನಮ್ಮ ವಕೀಲರ ಹೇಳಿಕೆ ಮೇರೆಗೆ ನಾವು ತಿದ್ದುಪಡಿ ಪತ್ರವನ್ನು ಮಾಡಿಸಿಕೊಂಡಿರುತ್ತೇವೆ .

21) ನಿಡಿ-08 ಮತ್ತು 9 ರ ಪ್ರಕಾರ 1 ನೇ ಪ್ರತಿವಾದಿಗೆ ಖಾತೆ 40 100 ಅಳತೆಗೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಇಷ್ಟೇ ವಿಸ್ತೀರ್ಣದ ಅಳತೆಗೆ ಹಾಗೂ ಚೆಕ್‌ಬಂದಿಗೆ ಕ್ರಯಪತ್ರ ಮಾಡಿಸಿಕೊಳ್ಳಬೇಕೆಂದು ನಮ್ಮ ವಕೀಲರು ನಮಗೆ ತಿಳಿಸಿದ್ದರು.

ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.